# ಶ್ರೀಮಾತೆ ಮಾಡುತ್ತಿದ್ದ ಪೂಜೆಯ ವೈಶಿಷ್ಟ್ಯ ಹಾಗೂ ತಾತ್ಪರ್ಯ

ಬಂಗಾಳಿ ಮೂಲ: **ಸ್ವಾಮಿ ಪ್ರಮೇಯಾನಂದ**

ಅನುವಾದ : **ಸ್ವಾಮಿ ಆತ್ಮಜ್ಞಾನಂದ**

## ಭಾಗ ೧

ಸಾಂಪ್ರದಾಯಿಕ ಪೂಜೆಯ ವಿವಿಧ ಅಂಗಗಳ ಹಿಂದಿರುವ ಭಾವವನ್ನು ಧರಿಸಿಕೊಂಡು ನಿಜವಾದ ಪೂಜೆ ಮಾಡುವ ಬಗೆಯನ್ನು ತಿಳಿಯಲು ಶ್ರೀರಾಮಕೃಷ್ಣರು, ಶ್ರೀಮಾತೆಯವರು ಮಾಡುತ್ತಿದ್ದ ಭಾವಪೂರ್ಣ ಪೂಜಾವಿಧಾನವನ್ನು ಅರಿತುಕೊಳ್ಳುವುದು ಅತ್ಯಂತ ಉಪಯುಕ್ತ. ಈ ಕುರಿತು ಅತ್ಯಂತ ಮೌಲಿಕವಾಗಿ ಬರೆದಿರುವ ದಿವಂಗತ ಪ್ರಮೇಯಾನಂದಜಿ ಮಹಾರಾಜರು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿದ್ದರು. ರಾಮಕೃಷ್ಣ ಇನಸ್ಟಿಟ್ಯೂಟ್ ಆಫ್ ಕಲ್ಚರ್‌ನಿಂದ ಪ್ರಕಟವಾದ **'ಶಾರದಾ ಅನುಧ್ಯಾನ್'** ಎಂಬ ಗ್ರಂಥದಲ್ಲಿ ಪ್ರಕಟವಾದ 'ಶ್ರೀ ಶ್ರೀ ಮಾಯೇರ್ ಪೂಜಾರ್ ವೈಶಿಷ್ಟ್ಯ ಓ ತಾತ್ಪರ್ಯ' ಎಂಬ ಮೂಲ ಲೇಖನದ ಅನುವಾದಕರು ಹಿಂದೆ 'ವಿವೇಕಪ್ರಭ' ದ ಸಂಪಾದಕರಾಗಿದ್ದರು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರೂ ಆಗಿದ್ದ ಅವರು ಪ್ರಸ್ತುತ ಚಂಡೀಗಢ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.



ಅನೇಕ ಅರ್ಥಗಳುಳ್ಳ 'ಪೂಜೆ' ಶಬ್ದವು ಎಲ್ಲರಿಗೂ ಸುಪರಿಚಿತ. ಪ್ರತಿನಿತ್ಯ ಬಳಸುವ ಈ ಪೂಜಾ ಶಬ್ದವು ನಿತ್ಯಕರ್ಮವೂ ಕೂಡ. 'ಗೌರವಾನ್ವಿತರ ಪ್ರೀತಿಗಾಗಿ ಮಾಡುವ ಕ್ರಿಯೆ'ಯೇ ಪೂಜೆ. ಸಾಧಾರಣವಾಗಿ ದೇವತೆಗಳ ಉದ್ದೇಶದಲ್ಲಿ ಮಾಡುವ ಕರ್ಮಗಳಿಗೆ ಅಥವಾ ಅನುಷ್ಠಾನಗಳಿಗೆ ಪೂಜೆ ಎನ್ನುತ್ತಾರೆ. ಉದಾಹರಣೆಗೆ ದುರ್ಗಾಪೂಜೆ, ಕಾಳೀಪೂಜೆ ಇತ್ಯಾದಿ. ಪುರಾಣ ಹಾಗೂ ತಂತ್ರಶಾಸ್ತ್ರಗಳಲ್ಲಿ ಈ ಪೂಜೆಗಳನ್ನು ಮಾಡುವ ವಿಧಿ ಹಾಗೂ ನಿಷೇಧಗಳನ್ನು ಸ್ಪಷ್ಟವಾಗಿ ಹೇಳಲಾಗಿದೆ. ಪೂಜೆ ಒಂದು ರೀತಿಯ ಅನುಷ್ಠಾನವಾದರೂ ಆ ಪದ ಪಡೆದುಕೊಂಡಿರುವ ಅರ್ಥಗಳಿಂದ ಅದರ ವ್ಯಾಪ್ತಿ ತಿಳಿದು ಬರುತ್ತದೆ. ಮನುಸಂಹಿತೆಯಲ್ಲಿ ಬರುವ ಶ್ಲೋಕದ ಒಂದು ಭಾಗ ಹೀಗಿದೆ, **'ನೃಯಜ್ಞೋಽತಿಥಿ ಪೂಜನಮ್'** *(ಮನುಸಂಹಿತಾ, ೮.೨೦)* — ಅಂದರೆ ಅತಿಥಿಗೆ ಮಾಡುವ ಸೇವೆ ಅಥವಾ ಪೂಜೆಯೇ ನೃಯಜ್ಞ. ಪೂಜೆ ಮಾಡುವಾಗ ಬಳಸುವ ನ್ಯಾಸ ಪ್ರಾಣಯಾಮದಿಗಳನ್ನು ಅತಿಥಿಗೆ ಸೇವೆ ಮಾಡುವಾಗ ಬಳಸುವುದಿಲ್ಲವಾದರೂ ಅತಿಥಿಯನ್ನು ಬರಮಾಡಿಕೊಳ್ಳುವುದು, ಪ್ರೀತಿಯಿಂದ ಸತ್ಕರಿಸುವುದು — ಇವೆಲ್ಲ ಪೂಜೆಗೆ ಸಮಾನ. ಆದ್ದರಿಂದ ಶ್ರದ್ಧೆಯ ಭಾವ ಹಾಗೂ ಪ್ರೀತಿಯ ಸೇವೆಯೇ ಪೂಜೆಯ ಮೂಲ ಉದ್ದೇಶ. ಶಾಸ್ತ್ರಗಳಲ್ಲಿ ವಿಧಿಸಿರುವಂತೆ ದೇವತೆಗಳ ಪ್ರೀತಿಗಾಗಿ ಮಾಡುವ ಕ್ರಿಯೆಯೇ ಪೂಜೆಯೆಂಬ ಸಾಮಾನ್ಯ ಅರ್ಥದಲ್ಲೇ ನಾವು ಇಲ್ಲಿ ಶಬ್ದವನ್ನು ಬಳಸಿದ್ದೇವೆ.

ಶ್ರೀರಾಮಕೃಷ್ಣ ಮತ್ತು ಶ್ರೀಶಾರದಾದೇವಿ ಸಾಕ್ಷಾತ್ ಭಗವಾನ್ ಮತ್ತು ಭಗವತಿ ಎಂಬುದರಲ್ಲಿ ಸಂದೇಹವಿಲ್ಲ. ಒಂದೇ ತತ್ತ್ವದ ಎರಡು ರೂಪಗಳಾದರೂ, ಪೂಜಾರಿ ಹಾಗೂ ಆರಾಧ್ಯ ದೇವರು ಎಂದು ಅವರಲ್ಲಿ ಭೇದ ಮಾಡಲಾಗದಿದ್ದರೂ ಆಶ್ಚರ್ಯದ ವಿಷಯವೇನೆಂದರೆ, ಇಬ್ಬರೂ ತಮ್ಮಲ್ಲಿ ಮತ್ತೊಬ್ಬರನ್ನು ಪೂಜೆಯ ಆಸನದಲ್ಲಿ ಕೂಡಿಸಿ ಭಕ್ತಿ, ಶ್ರದ್ಧೆಗಳಿಂದ ಪೂಜೆ ಮಾಡಿದ್ದಾರೆ! ಶ್ರೀರಾಮಕೃಷ್ಣರು ಶ್ರೀಶಾರದಾದೇವಿಯನ್ನು ದಶ ಮಹಾವಿದ್ಯೆಯ ರೂಪಗಳಲ್ಲಿ ಒಂದಾದ ಷೋಡಶೀ ಮಾತೆಯ ರೂಪದಲ್ಲಿ ವಿಧಿವತ್ತಾಗಿ ಪೂಜಿಸಿದ್ದು ಇತಿಹಾಸ ಪ್ರಸಿದ್ಧ. ಶ್ರೀರಾಮಕೃಷ್ಣರ ನೇರಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಅಭೇದಾನಂದರು ಶಾರದಾದೇವಿಯವರ ಸ್ತುತಿಯಲ್ಲಿ 'ರಾಮಕೃಷ್ಣಗತ ಪ್ರಾಣಾ' ಎಂದು ಹೊಗಳಿದ್ದಾರೆ. **'ಯದ್ಯತ್ ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಮ್'** — 'ನಾನು ಯಾವುದೇ ಕರ್ಮವನ್ನು ಮಾಡಿದರೂ, ಹೇ ಶಂಭು, ಅದು ನಿನ್ನ ಆರಾಧನೆಯೇ ' ಎಂಬ ಪ್ರಸಿದ್ಧ ಹೇಳಿಕೆಯ ಸಾಕಾರಮೂರ್ತಿ ಶ್ರೀಮಾತೆ.

ಶ್ರೀಮಾತೆಯವರ ಜೀವನವನ್ನು ಅಧ್ಯಯನ ಮಾಡಿದರೆ ಅವರು ತಮ್ಮ ಜೀವನದುದ್ದಕ್ಕೂ ಶ್ರೀರಾಮಕೃಷ್ಣರ ಪೂಜೆಯನ್ನೇ ಮಾಡಿದರು ಮತ್ತು ಅವರ ಜೀವನ ರಾಮಕೃಷ್ಣಮಯವಾಗಿತ್ತು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಶ್ರೀರಾಮಕೃಷ್ಣರು ಜೀವಿತವಿದ್ದಾಗ ಪೂಜೆ ಮಾಡುವ ಪದ್ಧತಿಯಂತೆ ಶ್ರೀಮಾತೆ ಪತಿಯ ಪೂಜೆಯನ್ನು ವಿಧಿವತ್ತಾಗಿ ಮಾಡಿರುವ ವಿಚಾರ ನಮಗೆ ತಿಳಿದಿಲ್ಲ

ವಾದರೂ ಶ್ರೀರಾಮಕೃಷ್ಣರ ಭಾವಚಿತ್ರಕ್ಕೆ ಪ್ರತಿನಿತ್ಯವೂ ಹೂವುಗಳನ್ನು ಅರ್ಪಿಸುತ್ತಿದ್ದರು ಎಂಬುದು ಗೊತ್ತಾಗುವುದು. ಹಾಗೆ ನೋಡಿದರೆ ಶ್ರೀರಾಮಕೃಷ್ಣರ ಪೂಜೆಯನ್ನು ಮೊದಲು ಪ್ರಾರಂಭ ಮಾಡಿದವರು ಶ್ರೀಮಾತೆಯೆ! ಶ್ರೀಮಾತೆಯವರ ಸೇವಕರಲ್ಲಿ ಒಬ್ಬರಾದ ಸ್ವಾಮಿ ಅರೂಪಾನಂದರು ಹೇಳಿರುವ ಸಂಭಾಷಣೆಯನ್ನು ಗಮನಿಸೋಣ. ಕಲ್ಕತ್ತೆಯ 'ಉದ್ಬೋಧನ' ದಲ್ಲಿರುವ ಪೂಜಾಕೋಣೆಯಲ್ಲಿ ಸ್ವಾಮಿ ಅರೂಪಾನಂದರು ಶ್ರೀಮಾತೆಯವರನ್ನು ಮಾತನಾಡಿಸುತ್ತ ಕೇಳಿದರು, ''ಅಮ್ಮ! ನಿಮ್ಮ ಬಳಿ ಇರುವ ಈ ಶ್ರೀರಾಮಕೃಷ್ಣರ ಭಾವಚಿತ್ರ ತುಂಬ ಚೆನ್ನಾಗಿದೆ. ಸ್ಪಷ್ಟವಾಗಿ ಕಾಣುತ್ತದೆ. ಠಾಕೂರರು ಹೀಗೇ ಇದ್ದರಲ್ಲವೆ?''

**ಶ್ರೀಮಾತೆ :** ಇದು ಬಹಳ ಸ್ಪಷ್ಟವಾಗಿದೆ ಹಾಗೂ ಅವರಂತೆಯೇ ಇದೆ. ಇದು ಒಬ್ಬ ಬ್ರಾಹ್ಮಣನ ಬಳಿಯಿತ್ತು. ಮೊದಲ ಬಾರಿ ತೆಗೆದಾಗಲೇ ಆ ಬ್ರಾಹ್ಮಣನ ಬಳಿ ಒಂದು ಪ್ರತಿಯಿತ್ತು. ಮೊದಲು ಇದು ಬಹಳ ಕಪ್ಪಾಗಿತ್ತು — ಕಾಳಿಯ ಮೂರ್ತಿಯಂತೆ! ಆದ್ದರಿಂದ ಅದನ್ನು ಆ ಬ್ರಾಹ್ಮಣನಿಗೆ ಕೊಡಲಾಗಿತ್ತು. ಆತ ದಕ್ಷಿಣೇಶ್ವರದ ಮತ್ತೆಲ್ಲಿಗೋ ಹೋಗುವಾಗ ಆ ಭಾವಚಿತ್ರವನ್ನು ನನಗೆ ಕೊಟ್ಟುಬಿಟ್ಟ. ಬೇರೆ ದೇವದೇವಿಯರ ಚಿತ್ರಗಳೊಂದಿಗೆ ಅದನ್ನು ಇಟ್ಟು ನಾನು ಅದನ್ನು ಪೂಜಿಸುತ್ತಿದ್ದೆ. ಆಗ ನಾನು ನಹಬತಿನ ಕೆಳಗಿನ ಕೋಣೆಯಲ್ಲಿವಾಸಿಸುತ್ತಿದ್ದೆ. ಒಂದು ದಿವಸ ಠಾಕೂರರು ಅಲ್ಲಿಗೆ ಬಂದರು. ಭಾವಚಿತ್ರವನ್ನು ನೋಡಿ ಹೇಳಿದರು, ''ಓ! ಇದೇನಿದು ನಿಮ್ಮಗಳ ಆಚರಣೆ?'' ನಾನು (ಹಾಗೂ ಲಕ್ಷ್ಮೀದೇವಿ ಇದ್ದಿರಬೇಕು) ಆ ಕಡೆ ಮಹಡಿಯ ಕೆಳಗೆ ಅಡಿಗೆ ಮಾಡುತ್ತಿದ್ದೆ. ಆಮೇಲೆ ನಾನೇ ನೋಡಿದೆ, ಅಲ್ಲಿ ಇಟ್ಟಿದ್ದ ಬಿಲ್ವಪತ್ರೆ, ಚಂದನ ಇತ್ಯಾದಿಗಳಿಂದ ಒಂದಲ್ಲ ಎರಡು ಬಾರಿ ತಾವೇ ಈ ಭಾವಚಿತ್ರಕ್ಕೆ ಪೂಜೆ ಮಾಡಿದರು! ಇದು ಅದೇ ಭಾವಚಿತ್ರ. ಆ ಬ್ರಾಹ್ಮಣ ಮತ್ತೆ ಹಿಂದಿರುಗಿ ಬರಲೇ ಇಲ್ಲ. ಇದು ನನ್ನ ಬಳಿಯೇ ಉಳಿಯಿತು.''

ಶ್ರೀರಾಮಕೃಷ್ಣರು ಜೀವಿತವಾಗಿದ್ದಾಗಲೇ ಅವರ ಭಾವಚಿತ್ರಕ್ಕೆ ಪೂಜೆ ಮಾಡುವುದನ್ನು ಶ್ರೀಮಾತೆ ಪ್ರಾರಂಭಿಸಿದ್ದರು ಎಂಬುದು ಮೇಲಿನ ಘಟನೆಯಿಂದ ತಿಳಿದು ಬರುತ್ತದೆ. ಒಂದು ರೀತಿಯಲ್ಲಿ ಹೇಳುವುದಾದರೆ ಶ್ರೀರಾಮಕೃಷ್ಣರೇ ತಮ್ಮ ಭಾವಚಿತ್ರಕ್ಕೆ ಪೂಜೆ ಮಾಡುವುದನ್ನು ಪ್ರಾರಂಭಿಸಿದರು. ಆದರೆ ಶ್ರೀಮಾತೆಯೇ ಇದಕ್ಕೆ ಪ್ರತಿನಿತ್ಯವೂ ಮಾಡುವ ಕ್ರಿಯೆಯಾಗಿ ಚಾಲನೆ ನೀಡಿದರು. ಶ್ರೀಮಾತೆ ಮಾಡಿದ ಈ ಪೂಜೆಯಲ್ಲಿ ಮೊದಲನೆಯದಾಗಿ ನಮ್ಮ ಗಮನಕ್ಕೆ ಬರುವ ಸಂಗತಿಯೇನೆಂದರೆ, ಶ್ರೀರಾಮಕೃಷ್ಣರ ಭಾವಚಿತ್ರಕ್ಕೆ ಪೂಜೆ ಮಾಡುತ್ತಿದ್ದುದು. ಸ್ವಾಮಿ ಅರೂಪಾನಂದರೊಂದಿಗೆ ನಡೆದ ಮತ್ತೊಂದು ಸಂಭಾಷಣೆಯಲ್ಲಿ ಶ್ರೀಮಾತೆ ಹೇಳುವುದನ್ನು ಗಮನಿಸಿ ನೋಡಿ: ''ಪುರೀ ಕ್ಷೇತ್ರವನ್ನು ನೋಡಲು ಹೋಗಿದ್ದಾಗ ಮೊದಲ ದಿನವೇ ಮುಂಜಾನೆಯ ಹೊತ್ತಿನಲ್ಲಿ, ಶ್ರೀರಾಮಕೃಷ್ಣರ ಭಾವಚಿತ್ರವನ್ನು ತುಪ್ಪದ ಒಂದು ಡಬ್ಬಕ್ಕೆ ಒರಗಿಸಿ ಇಟ್ಟು, ಅದಕ್ಕೆ ಪೂಜೆಯನ್ನು ಮಾಡಿ, ದೇವರ ದರ್ಶನ ಮಾಡಲು ದೇವಸ್ಥಾನಕ್ಕೆ ಶೀಘ್ರವಾಗಿ ಹೊರಟುಹೋದೆ. ಮನೆಯ ಬಾಗಿಲು ಕಿಟಕಿಗಳನ್ನೆಲ್ಲ ಮುಚ್ಚಿದ್ದೆವು. ಹಿಂದಿರುಗಿ ಬಂದು ನೋಡಿದಾಗ ಠಾಕೂರರ ಭಾವಚಿತ್ರವು ಟಿನ್ನಿನ ಡಬ್ಬಿಯ ಕೆಳಗಿತ್ತು. ಎಲ್ಲರೂ ಬಂದು ನೋಡಿದರು. ಕಳ್ಳ ಬಂದಿರಬಹುದು ಎಂದು ಎಲ್ಲರೂ ಭಾವಿಸಿದರು. ಆದರೆ ಕೋಣೆಯಲ್ಲಿದ್ದ ಬೇರಾವ ವಸ್ತುವನ್ನೂ ಬದಲಾವಣೆ ಮಾಡಿರಲಿಲ್ಲ. ಹುಡುಕಾಡುತ್ತಿದ್ದಾಗ ನಾನು ಕಂಡದ್ದೇನು? ತುಪ್ಪದ ಡಬ್ಬಿಗೆ ಕೆಂಪಿರುವೆಗಳು ಬಂದುಬಿಟ್ಟಿದ್ದವು. ಶ್ರೀರಾಮಕೃಷ್ಣರ ಭಾವಚಿತ್ರಕ್ಕೂ ಹತ್ತಿದ್ದವು. ಆದ್ದರಿಂದ ಅವರು ಅಲ್ಲಿಂದ ಕೆಳಗೆ ಇಳಿದು ಬಂದಿದ್ದರು.''

**ಸ್ವಾಮಿ ಅರೂಪಾನಂದ :** ''ಶ್ರೀರಾಮಕೃಷ್ಣರು ಭಾವಚಿತ್ರದಲ್ಲಿ ಇರುವರೆ?''

**ಶ್ರೀಮಾತೆ :** ''ಇಲ್ಲವೇ ಮತ್ತೆ! ಪ್ರತಿಬಿಂಬ ಹಾಗೂ ವ್ಯಕ್ತಿ ಒಂದೇ. ಆ ಭಾವಚಿತ್ರವು ಅವರದೇ ನಕಲು.''

**ಸ್ವಾಮಿ ಅರೂಪಾನಂದ :** ''ಎಲ್ಲ ಭಾವಚಿತ್ರಗಳಲ್ಲೂ ಅವರು ಇರುವರೆ?''

**ಶ್ರೀಮಾತೆ :** ''ಹೌದು. ನಾವು ಕರೆಯುತ್ತಿದ್ದಂತೆ ಆ ಭಾವಚಿತ್ರದಲ್ಲಿ ಅವರ ಆವಿರ್ಭಾವವಾಗುವುದು. ಆ ಸ್ಥಾನವೇ ಒಂದು ಪೀಠವಾಗುವುದು. ಉದಾಹರಣೆಗೆ ಈ ಪ್ರದೇಶದಲ್ಲಿ ('ಉದ್ಬೋಧನ'ದ ಉತ್ತರ ದಿಕ್ಕಿನಲ್ಲಿರುವ ಬಯಲು ಪ್ರದೇಶದತ್ತ ತೋರಿಸುತ್ತ) ಯಾರಾದರೂ ಅವರ ಪೂಜೆ ಮಾಡಿದರೆ ಇದು ಅವರ ಕ್ಷೇತ್ರವಾಗುತ್ತದೆ.''

ಪೂಜೆಯ ಸಮಯದಲ್ಲಿ ಪೂಜ್ಯ ದೇವರ ವಿಗ್ರಹ ಅಥವಾ ಭಾವಚಿತ್ರವನ್ನು ಮುಂದೆ ಇರಿಸಿಕೊಂಡು ಪೂಜೆ ಮಾಡುವುದೇ ಸಂಪ್ರದಾಯ. ಘಟ್ಟವನ್ನು ಸ್ಥಾಪಿಸಿ, ಸಾಲಿಗ್ರಾಮ ಅಥವಾ ಬಾಣೇಶ್ವರ ಶಿವಲಿಂಗವನ್ನು ಬಳಸಿ ಬೇರೆ ಬೇರೆ ದೇವದೇವಿಯರ ಆಹ್ವಾನವನ್ನು ಮಾಡಿ ಪೂಜೆ ಮಾಡುವುದೂ ಶಾಸ್ತ್ರಗಳಲ್ಲಿ ಹೇಳಿರುವಂತೆಯೇ. ಶ್ರೀರಾಮಕೃಷ್ಣರ ಭಾವಚಿತ್ರಕ್ಕೇ ಪೂಜೆಯ ವಸ್ತುಗಳನ್ನು ನಿವೇದಿಸುತ್ತ ಶ್ರೀಮಾತೆ ಪೂಜೆ ಮಾಡುತ್ತಿದ್ದರು. ಈಗಾಗಲೇ ಮೇಲೆ ನಿರೂಪಿಸಿರುವಂತೆ ಭಾವಚಿತ್ರದಲ್ಲಿ ಅವರೇ ಸಾಕ್ಷಾತ್ ಇದ್ದಾರೆ ಎಂಬುದರ ಬಗ್ಗೆ ಶ್ರೀಮಾತೆಗೆ ಯಾವುದೇ ಸಂದೇಹವಿರಲಿಲ್ಲ. ವ್ಯಕ್ತಿಯ ಚಿತ್ರವು ಆ ವ್ಯಕ್ತಿಯದೇ ಪ್ರತಿಬಿಂಬ ಹಾಗೂ ಇವೆರಡರಲ್ಲಿ ಯಾವುದೇ ವ್ಯತ್ಯಾಸವಿಲ್ಲ ಎಂದು ಈ ಮೂಲಕ ದೃಢೀಕರಿಸಿದ್ದಾರೆ. ನಾವು ಕನ್ನಡಿಯಲ್ಲಿ ನೋಡಿಕೊಂಡಾಗ ಪ್ರತಿಬಿಂಬದಲ್ಲಿ ತೋರುವ ಮುಖದಲ್ಲಿ ವ್ಯತ್ಯಾಸವಿದ್ದರೆ, ಇದು ನನ್ನ ಮುಖವಲ್ಲ ಎಂದು ನಮಗನಿಸುತ್ತಿತ್ತು. ಇದು ಮಿಥ್ಯೆ ಅಥವಾ ಸುಳ್ಳು ಎಂದು ತೋರುತ್ತಿತ್ತು. ಆದ್ದರಿಂದ ಪ್ರತಿಬಿಂಬವು ಸತ್ಯವೇ. ಅವತಾರ ಪುರುಷರಲ್ಲಿ ಶ್ರೀರಾಮ

ಕೃಷ್ಣರು ಈ ವಿಷಯದಲ್ಲಿ ಮೊದಲು — ಭಾವಚಿತ್ರದಲ್ಲಿ ಅವರನ್ನು ಕಾಣಬಹುದು. ಯಾವುದೋ ಕಾಲ್ಪನಿಕ ಚಿತ್ರವಲ್ಲ ಅದು!

ಪ್ರತಿಕೃತಿಯಲ್ಲಿ ದೇವತೆಯ ಅಸ್ತಿತ್ವವಿರುವುದರ ಬಗ್ಗೆ ಇನ್ನೊಂದು ನಿಶ್ಚಿತ ಪ್ರಮಾಣ ನಮಗೆ ಶ್ರೀಮತಿ ಸರಯೂಬಾಲಾ ಹಾಗೂ ಸ್ವಾಮಿ ಅರೂಪಾನಂದರು ಶ್ರೀಮಾತೆಯವರೊಡನೆ ನಡೆಸಿದ ಸಂಭಾಷಣೆಗಳಲ್ಲಿ ದೊರೆಯುತ್ತದೆ. ಸರಯೂ ಬಾಲಾ ಅವರ ನೆನಪುಗಳಲ್ಲಿ ಹೀಗಿದೆ: ''ಶ್ರೀಮಾತೆಗೆ ಎಣ್ಣೆ ಹಚ್ಚಿ ಒತ್ತುತ್ತಿದ್ದಾಗ ಹೇಳಿದೆ, ಅಮ್ಮಾ! ಒಂದು ದಿನ ನಾನು ಪೂಜೆ ಮುಗಿಸಿ ಮನೆಯ ಇತರ ಕೆಲಸಗಳನ್ನು ಮುಗಿಸುತ್ತಿದ್ದೆ. ಸ್ವಲ್ಪ ಸಮಯದ ನಂತರ ಪೂಜೆಯ ಕೋಣೆಯೊಳಕ್ಕೆ ಮತ್ತೆ ಬಂದಾಗ ಠಾಕೂರರ ಪಟದಲ್ಲಿ ಬೆವರಿನ ಹನಿಗಳು ಕಂಡವು. ಕೋಣೆಯ ಕಿಟಕಿಗಳು ತೆಗೆದಿದ್ದವು. ಸೂರ್ಯನ ಬಿಸಿಲು ಪಟಕ್ಕೆ ತಾಕುತ್ತಿತ್ತು . ಪೂಜೆ ಮಾಡುವಾಗ ಎಲ್ಲೋ ಸ್ವಲ್ಪ ನೀರು ತಾಕಿರಬೇಕು ಎಂದೇ ನಾನು ಭಾವಿಸಿದೆ. ಚೆನ್ನಾಗಿ ಒರೆಸಿ ಮತ್ತೆ ಸರಿಯಾಗಿ ಇರಿಸಿ ಹೋದೆ. ಬಿಸಿಲಿನ ತಾಪಕ್ಕೆ ಬೆವರುತ್ತಿದ್ದಾರೆಯೇ ಇಲ್ಲವೇ ಎಂಬ ವಿಷಯ ಖಾತರಿ ಮಾಡಿಕೊಳ್ಳಲು ಮತ್ತೆ ಪೂಜೆಯ ಕೋಣೆಗೆ ಬಂದು ನೋಡಿದೆ. ಈ ಬಾರಿಯೂ ಠಾಕೂರ್ ಬೆವರಿರುವುದನ್ನು ಕಂಡೆ. ಆಗ ಕೂಡಲೇ ಕಿಟಕಿಗಳ ಬಾಗಿಲನ್ನು ಮುಚ್ಚಿದೆ.''

**ಶ್ರೀಮಾತೆ :** ''ಹೌದು ಹಾಗೆ ಆಗುವುದುಂಟು. ಠಾಕೂರ್ ಹೇಳುತ್ತಿದ್ದರು, ''ಪ್ರತಿಬಿಂಬ, ವ್ಯಕ್ತಿ , ಘಟ, ಚಿತ್ರಪಟಗಳೆಲ್ಲ ಸಮಾನ.''

ಸ್ವಾಮಿ ಅರೂಪಾನಂದರೊಂದಿಗೆ ನಡೆದ ಸಂಭಾಷಣೆ ಹೀಗಿದೆ:

**ಸ್ವಾಮಿ ಅರೂಪಾನಂದ :** ''ಅದು ಸರಿ, ಠಾಕೂರರರಿಗೆ ನೀವು ಆಹಾರ ಪದಾರ್ಥಗಳನ್ನು ನಿವೇದಿಸುತ್ತೀರಲ್ಲಾ, ಅವುಗಳನ್ನೆಲ್ಲ ಠಾಕೂರ್ ತಿನ್ನುತ್ತಾರೆಯೇ?''

**ಶ್ರೀಮಾತೆ :** ''ಹೌದು. ತಿನ್ನುತ್ತಾರೆ.''

**ಸ್ವಾಮಿ ಅರೂಪಾನಂದ :** ''ಎಲ್ಲಿ, ನನಗೇನೂ ಚಿಹ್ನೆ ಕಾಣುವುದಿಲ್ಲವಲ್ಲ?''

**ಶ್ರೀಮಾತೆ :** ''ಅವರ ಕಣ್ಣುಗಳಿಂದ ಒಂದು ಜ್ಯೋತಿ ಹೊರಬಂದು ಎಲ್ಲ ಪದಾರ್ಥಗಳನ್ನು ಸವಿದು ನೋಡುತ್ತದೆ. ಅವರ ಅಮೃತಸ್ಪರ್ಶದಿಂದ ಅದೆಲ್ಲವೂ ಮತ್ತೆ ಪರಿಪೂರ್ಣವಾಗುತ್ತದೆ. ಆದ್ದರಿಂದ ಕಮ್ಮಿಯಾಗುವುದಿಲ್ಲ.. ಅವರಿಗೇನೂ ಆಹಾರ ಬೇಕಿದೆಯೆ? ಭಕ್ತರ ಸಂತೋಷಕ್ಕಾಗಿ ಬಂದು ಸ್ವೀಕರಿಸುತ್ತಾರೆ. ಪ್ರಸಾದವನ್ನು ತಿಂದಾಗ ಚಿತ್ತಶುದ್ಧಿಯುಂಟಾಗುತ್ತದೆ. ನಿವೇದಿಸದೆ ಹಾಗೆಯೇ ಆಹಾರ ತಿಂದಾಗ ಚಿತ್ತವು ಮಲಿನವಾಗುತ್ತದೆ.''

**ಸ್ವಾಮಿ ಅರೂಪಾನಂದ :** ''ನಿಜವಾಗಿಯೂ ಠಾಕೂರರು ತಿನ್ನುತ್ತಾರೆಯೆ?''

**ಶ್ರೀಮಾತೆ :** ''ಹೌದು. ಠಾಕೂರರು ತಿಂದಿರುವರೇ ಇಲ್ಲವೇ ಎಂದು ನಾನು ನೋಡುವುದಿಲ್ಲವೆ? ಠಾಕೂರರು ತಿನ್ನಲು ಕುಳಿತು ಕೊಂಡು, ತಿನ್ನುತ್ತಾರೆ.''

**ಸ್ವಾಮಿ ಅರೂಪಾನಂದ :** ''ನೀವು ಹಾಗೆ ನೋಡಿರುವಿರಾ?''

**ಶ್ರೀಮಾತೆ :** ''ಹೌದು. ಕೆಲವರು, ಅಡಿಗೆ ಮಾಡಿದ್ದನ್ನು ನೋಡಿ ತಿನ್ನುತ್ತಾರೆ. ಮತ್ತೆ ಕೆಲವರದನ್ನು ಕೇವಲ ನೋಡುತ್ತಾರೆ. ಹಾಗೆ ನೋಡಿದರೆ, ನಿನಗೆ ಯಾವಾಗಲೂ ಎಲ್ಲ ಪದಾರ್ಥಗಳೂ ರುಚಿಸುತ್ತದೇನು? ಅಥವಾ ಎಲ್ಲರೂ ಮಾಡಿದ ಪದಾರ್ಥಗಳು ತಿನ್ನಲು ಆಗುತ್ತದೆಯೇ? ಹಾಗೆಯೇ ಇದು. ಅವರವರ ಭಾವ –ಭಕ್ತಿಗಳಿಗನುಸಾರ. ಭಕ್ತಿಯೇ ಪ್ರಧಾನ.''

ಪ್ರತಿಕೃತಿಯಲ್ಲಿ ದೇವತೆಯು ಸಾಕ್ಷಾತ್ ವಿರಾಜಮಾನರಾಗಿರುವುದರಿಂದಲೇ ಅವರಿಗೆ ನೈವೇದ್ಯವನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಹಾಗೆ ದೇವತೆಯಿಂದ ಸ್ವೀಕರಿಸಲ್ಪಟ್ಟ ನೈವೇದ್ಯವು ಅವರ ಅಮೃತಸ್ಪರ್ಶದಿಂದ ಪ್ರಸಾದವಾಗಿ ರೂಪಾಂತರ ಹೊಂದುತ್ತದೆ. ಆ ಪ್ರಸಾದವನ್ನು ಸ್ವೀಕರಿಸಿದಾಗ ಚಿತ್ತಶುದ್ಧಿಯಾಗಿ ಆಧ್ಯಾತ್ಮಿಕ ಉನ್ನತಿಗೆ ದಾರಿಯಾಗುತ್ತದೆ. ಶ್ರೀಮಾತೆಯ ದೃಷ್ಟಿಯಲ್ಲಿ ಪ್ರಸಾದವು ದೇವತೆಯ ಸ್ವರೂಪವೇ. ಸರಯೂಬಾಲಾ ದೇವಿಗೆ ಶ್ರೀಮಾತೆ ಹೀಗೆ ಹೇಳಿದ್ದಾರೆ, ''ಪ್ರಸಾದ ಹಾಗೂ ಹರಿಯ ನಡುವೆ ಯಾವುದೇ ವ್ಯತ್ಯಾಸವಿಲ್ಲ, (ಆಕೆಯ ಎದೆಯ ಮೇಲೆ ಕೈಯಿಟ್ಟು) ನಿನ್ನ ಮನಸ್ಸಿನಲ್ಲಿ ಇದರ ಬಗ್ಗೆ ಸಂಪೂರ್ಣ ವಿಶ್ವಾಸವಿರಲಿ.'' ಕ್ರೈಸ್ತ ಧರ್ಮಾವಲಂಬಿಗಳಲ್ಲಿರುವ Eucharist ಎಂಬ ಧಾರ್ಮಿಕ ಕ್ರಿಯೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ನೈವೇದ್ಯ ಮಾಡಿದ ಮದ್ಯ ಹಾಗೂ ರೊಟ್ಟಿಯನ್ನು ಏಸುಕ್ರಿಸ್ತನ ಪವಿತ್ರ ಶರೀರವೆಂಬ ಭಾವನೆಯೊಂದಿಗೆ ಅವರು ಸ್ವೀಕರಿಸುತ್ತಾರೆ.

ಠಾಕೂರರ ಪೂಜೆಯನ್ನು ಶ್ರೀಮಾತೆ ಮಾಡುತ್ತಿದ್ದಾಗ ನಾವು ಗಮನಿಸಬೇಕಾದ ಮತ್ತೊಂದು ವೈಶಿಷ್ಟ್ಯವೆಂದರೆ ಅದರಲ್ಲಿ ಎದ್ದು ಕಾಣುತ್ತಿದ್ದ ಆಡಂಬರರಹಿತ ಸೇವೆ. ವಾಸ್ತವಿಕವಾಗಿ ಯಾವುದೇ ತೋರಿಕೆಯಿಲ್ಲದೆ ಪೂಜೆಮಾಡುವುದೇ ಪೂಜೆಯ ಬಹಳ ಪ್ರಮುಖ ಅಂಶ. ಸಾತ್ತ್ವಿಕ, ರಾಜಸಿಕ ಹಾಗೂ ತಾಮಸಿಕವೆಂದು ಮೂರು ಬಗೆಯಾಗಿ ಪೂಜೆಯನ್ನು ವಿಂಗಡಿಸಲಾಗಿದೆ. ಸಾತ್ತ್ವಿಕ ಪೂಜೆಯಲ್ಲಿ ಯಾವುದೇ ಆಡಂಬರದ ಆವಶ್ಯಕತೆಯೇ ಇರುವುದಿಲ್ಲ. ಈ ರೀತಿಯ ಪೂಜೆಯಲ್ಲಿ ಯಾವುದೇ ಬೇಡಿಕೆಯಿರುವುದಿಲ್ಲ, ಪ್ರೇಮ–ಭಕ್ತಿಗಳೇ ಇಂತಹ ಪೂಜೆಯ ಮೂಲ ಉಪಕರಣಗಳು. ಶ್ರೀಮದ್ಭಗವದ್ಗೀತೆಯಲ್ಲಿ ಹೀಗೆ ಹೇಳಿದೆ:

**ಅಫಲಾಕಾಂಕ್ಷಿಭಿರ್ಯಜ್ಞೋ ವಿಧಿದೃಷ್ಟೋ ಯ ಇಜ್ಯತೇ ।**
**ಯಷ್ಟವ್ಯಮೇವೇತಿ ಮನಃ ಸಮಾಧಾಯ ಸ ಸಾತ್ತ್ವಿಕಃ ॥**

'ಯಾವುದೇ ಫಲಾಪೇಕ್ಷೆಯಿಲ್ಲದೆ ಶಾಸ್ತ್ರಸಮ್ಮತವಾದ ವಿಧಿಯಲ್ಲಿ ಕೇವಲ ಪೂಜೆ ಮಾಡಬೇಕೆಂಬ ಸಂಕಲ್ಪದೊಂದಿಗೆ ಸ್ಥಿರಗೊಳಿಸಿದ ಮನಸ್ಸಿನಿಂದ ಮಾಡುವುದು ಸಾತ್ತ್ವಿಕ ಪೂಜೆ.' ಭಗವಂತನು ಮತ್ತೂ ಹೇಳಿದ್ದಾನೆ:

**ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।**
**ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ ॥**

'ಯಾವ ಶುದ್ಧಚಿತ್ತವುಳ್ಳ ಭಕ್ತನು ನನಗೆ ಎಲೆಯನ್ನಾಗಲೀ, ಹೂವನ್ನಾಗಲೀ, ಹಣ್ಣನ್ನಾಗಲೀ ಅಥವಾ ನೀರನ್ನಾಗಲೀ ಭಕ್ತಿಯಿಂದ ಸಮರ್ಪಿಸುವನೋ ನಾನು ಅದನ್ನು ಸ್ವೀಕರಿಸುತ್ತೇನೆ.'

ಶ್ರೀಮಾತೆಯವರು ಮಾಡುತ್ತಿದ್ದ ಪೂಜೆಯೂ ಈ ರೀತಿಯದಾಗಿತ್ತು. ಪರಮ ಭಕ್ತಿ ಹಾಗೂ ನಿಷ್ಠೆಗಳೊಂದಿಗೆ ಅವರು ಠಾಕೂರರ ಪೂಜೆಯನ್ನು ಮಾಡುತ್ತಿದ್ದರು. ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತ ಛಟ್, ಫಟ್ ಎಂದು ಮಂತ್ರಗಳನ್ನು ಉಚ್ಚರಿಸುತ್ತ ತೋರಿಕೆಯ ಪೂಜೆಯನ್ನು ಅವರು ಎಂದೂ ಮಾಡುತ್ತಿರಲಿಲ್ಲ. ಠಾಕೂರರ ಆಸನದ ಮುಂದೆ ಕೆಳಭಾಗದಲ್ಲಿ ಗಂಗಾಜಲವಿರುವ ಹಿತ್ತಾಳೆಯ ಒಂದು ಕಮಂಡಲು ಇರುತ್ತಿತ್ತು. ಅದರ ಅಕ್ಕಪಕ್ಕಗಳಲ್ಲಿ ಗಂಧದ ಕೊರಡು, ಗಂಧ ತೇಯುವ ಕಲ್ಲು, ಪಂಚಪಾತ್ರೆ ಹಾಗೂ ಪೂಜೆಗೆ ಬಳಸುವ ಒಂದೆರಡು ಉಪಕರಣಗಳು ಇರುತ್ತಿದ್ದವು ಅಷ್ಟೆ. ಎಲ್ಲ ಕೆಲಸಗಳನ್ನೂ ಮುಗಿಸಿ ಸುಮಾರು ಬೆಳಿಗ್ಗೆ ಒಂಬತ್ತು ಗಂಟೆಯ ಹೊತ್ತಿಗೆ ಶ್ರೀಮಾತೆ ಪೂಜೆಗೆ ಕುಳಿತುಕೊಳ್ಳುತ್ತಿದ್ದರು. ಜಯರಾಂಬಾಟಿಯಲ್ಲಿ ಹಣ್ಣುಗಳು ದೊರೆಯುತ್ತಿರಲಿಲ್ಲ. ಆದ್ದರಿಂದ ಅವರು ಯಾವುದೇ ಸಂಕೋಚವಿಲ್ಲದೆ ತುಳಸಿ, ಎಲೆ ಹಾಗೂ ನೀರನ್ನು ಉಪಯೋಗಿಸಿ ಪೂಜಿಸುತ್ತಿದ್ದರು. ತುಳಸಿಯನ್ನು ಅತಿ ಪವಿತ್ರವೆಂದು ಶ್ರೀಮಾತೆ ಭಾವಿಸುತ್ತಿದ್ದರು. ತುಳಸಿಯ ಸ್ಪರ್ಶದಿಂದ ಎಲ್ಲವೂ ಶುದ್ಧವಾಗುತ್ತದೆ ಎಂದು ಹೇಳುತ್ತಿದ್ದರು. 'ಶ್ರೀ ಹರಿಭಕ್ತಿವಿಲಾಸ'ದಲ್ಲಿ ಹೀಗಿದೆ:

**ತುಳಸೀದಳ ಮಾತ್ರೇಣ ಜಲಸ್ಯ ಚುಲುಕೇನ ವಾ ।**
**ವಿಕ್ರೀಣೀತೇ ಸ್ವಮಾತ್ಮಾನಂ ಭಕ್ತೇಭ್ಯೋ ಭಕ್ತವತ್ಸಲಃ ॥**

'ಒಂದೇ ಒಂದು ತುಳಸೀಪತ್ರ ಹಾಗೂ ಒಂದು ಕೈಹಿಡಿ ನೀರನ್ನು ಸಮರ್ಪಿಸುವುದರಿಂದ ಆ ಭಕ್ತವತ್ಸಲನಾದ ಹರಿಯನ್ನು ಭಕ್ತನು ಕೊಂಡುಕೊಳ್ಳಬಹುದು, ಅಂದರೆ ವಶಪಡಿಸಿಕೊಳ್ಳಬಹುದು.'

ತುಳಸಿಯ ಮಹಾತ್ಮ್ಯೆಯನ್ನು ಸ್ಮರಿಸಿಕೊಂಡೇ ಇರಬೇಕು, ಶ್ರೀಮಾತೆ ಪ್ರತಿನಿತ್ಯವೂ ಪೂಜೆಯ ನಂತರ ಶ್ರೀರಾಮಕೃಷ್ಣರಿಗೆ ಅರ್ಪಿತವಾದ ತುಳಸಿಯನ್ನು ಅತ್ಯಂತ ಭಕ್ತಿಯಿಂದ ಪ್ರಸಾದವೆಂದು ಸ್ವೀಕರಿಸುತ್ತಿದ್ದರು. ಮನೆಕೆಲಸಗಳನ್ನೆಲ್ಲ ಅವರೇ ಮಾಡಬೇಕಾಗಿದ್ದರಿಂದ ಶ್ರೀಮಾತೆ ಠಾಕೂರರ ಪೂಜೆಗಾಗಿ ಹೆಚ್ಚು ಸಮಯ ವ್ಯಯ ಮಾಡುತ್ತಿರಲಿಲ್ಲ. ಈ ಎಲ್ಲ ಮನೆಕೆಲಸಗಳನ್ನು ಪೂಜೆಗಿಂತ ಭಿನ್ನವೆಂದು ಅವರ ಭಾವಿಸಲಿಲ್ಲ; ಏನೇ ಮಾಡಿದರೂ ಅದು ಕೇವಲ ಶ್ರೀರಾಮಕೃಷ್ಣರಿಗಾಗಿಯೇ. ಪೂಜೆಯ ನಂತರ ಪ್ರಸಾದವನ್ನು ಪಡೆಯಲು ಅನೇಕ ಭಕ್ತರು ವ್ಯಾಕುಲರಾಗಿ ಕಾಯುತ್ತಿದ್ದರು. ಅವರಿಗೆ ಪ್ರಸಾದವನ್ನು ನೀಡಿ ತೃಪ್ತಿಗೊಳಿಸುವುದೆಂದರೆ ಭಗವಂತನಿಗೇ ಸೇವೆ ಮಾಡಿದಂತೆ. ಆದ್ದರಿಂದ ಪೂಜೆಯಲ್ಲಿ ಘಂಟೆಯ ಬಳಿಕ ಘಂಟೆಯನ್ನು ಕಳೆಯುವುದಕ್ಕಿಂತ ಪೂಜೆಗೆ ಬೇಕಾದಷ್ಟು ಸಮಯಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳದೆ ಭಕ್ತರ ವೇಷದಲ್ಲಿರುವ ಅದೇ ಭಗವಂತನ ಸೇವೆಯನ್ನು ಮಾಡುವುದು ಯಾವುದೇ ದೃಷ್ಟಿಯಿಂದ ಕೀಳಲ್ಲ. ಒಂದು ಘಂಟೆಯೊಳಗೆ ಪೂಜೆಯನ್ನು ಮುಗಿಸಿ ಭಕ್ತರಿಗೆ ಪ್ರಸಾದವನ್ನು ನೀಡಲು ಸಾಲಮರದ ಎಲೆಗಳನ್ನು ಅಣಿಮಾಡುತ್ತಿದ್ದರು. ಯಾರಾದರೂ ಪೂಜೆಯನ್ನು ಮಾಡಿ, ಅನಂತರ ಸ್ತವ ಪಾಠಗಳಿಗಾಗಿ ಹೆಚ್ಚು ಸಮಯ ತೆಗೆದುಕೊಂಡರೆ ಶ್ರೀಮಾತೆ ಮುನಿಸಿಕೊಳ್ಳುತ್ತಿದ್ದರು. ಅವರು ಒಂದು ದಿನ ಹೇಳಿದರು, ''ಮೊದಲು ಪೂಜೆ ಹಾಗೂ ನೈವೇದ್ಯವನ್ನು ಮುಗಿಸಿ ಆಮೇಲೆ ಎಷ್ಟು ಹೊತ್ತಾದರೂ ಸ್ತವಪಾಠಗಳನ್ನು ಮಾಡಲಿ. ಇದೇನಿದು, ಜನ ತಿಂಡಿ ತಿನ್ನದೆ ಕಾಯುತ್ತಿದ್ದಾರೆ, ತಡವಾಗಿ ಹೋಗುತ್ತದಲ್ಲ!''

ಪೂಜಿಸಲ್ಪಡುತ್ತಿರುವ ಭಗವಂತ ಪೂಜಾರಿಯ ಅಂತರಾತ್ಮ; ಅವನ ಪ್ರಾಣದ ಪ್ರಾಣ. ಆದ್ದರಿಂದ ಪೂಜ್ಯ ದೇವತೆಯ ಬಗ್ಗೆ ಗಂಭೀರವಾದ ಶ್ರದ್ಧೆಯಿಂದ ಒಂದು ಕಡೆ ವಿನಯಶೀಲನಾಗಿದ್ದರೆ ಮತ್ತೊಂದು ಕಡೆ ಪೂಜಾರಿಯು ಅನುರಾಗದ ಬಂಧನದಿಂದ ಗಟ್ಟಿಯಾಗಿ ದೇವರೊಂದಿಗೆ ಬದ್ಧ. ಹಾಗಾಗಿ ಪರಿಸ್ಥಿತಿ ಪ್ರತಿಕೂಲವಾಗಿದ್ದರೂ ಯಾವುದೇ ಸಂದೇಹವಿಲ್ಲದೆ ಅಥವಾ ವಿಚಲಿತನಾಗದೆ ಪೂಜಾರಿಯು ತನ್ನ ಪಾಡಿಗೆ ತಾನು ನಿಷ್ಠೆಯಿಂದ ಸೇವೆ ಹಾಗೂ ಆರಾಧನೆಗಳನ್ನು ಮುಂದುವರಿಸಿಕೊಂಡು ಹೋಗುತ್ತಾನೆ. ಅಕ್ಕಪಕ್ಕದ ಪರಿಸ್ಥಿತಿ, ಸುತ್ತಮುತ್ತಲಿನ ಅವಸ್ಥೆ ಹಾಗೂ ಕಷ್ಟದಲ್ಲಿರುವ ಇತರರ ತೊಂದರೆ — ಇತ್ಯಾದಿಗಳನ್ನು ವಿವೇಚಿಸಿ ಪೂಜಾರಿಯು ಪೂಜೆ ಮಾಡುತ್ತಾನೆ. ಸಂಪ್ರದಾಯಕ್ಕೆ ಅಥವಾ ಪೂಜೆಯ ನಿಯಮಗಳಿಗೆ ಧಕ್ಕೆ ಬಂದರೂ, ಅವುಗಳನ್ನು ಉಲ್ಲಂಘಿಸಿದರೂ, ಪೂಜಾರಿಯ ಒಮ್ಮನಸ್ಸಿನ ಅನುರಾಗ ಅಂತಹ ಪೂಜೆಯನ್ನು ಮಹಿಮೆಯ ಸ್ತರಕ್ಕೆ ಕೊಂಡೊಯ್ಯುತ್ತದೆ. ಶ್ರೀಮಾತೆಯ ಜೀವನದಲ್ಲಿ ನಡೆದ ಒಂದು ಘಟನೆ ಈ ಭಾವನೆಯನ್ನು ಸಮರ್ಥಿಸುತ್ತದೆ: ಶ್ರೀಮಾತೆ ಹಾಗೂ ಸಂಗಡಿಗರು ಆರು ಎತ್ತಿನ ಗಾಡಿಗಳಲ್ಲಿ ಮುಂಜಾನೆಯ ಹೊತ್ತು ಹೊರಟು ವಿಷ್ಣುಪುರದಿಂದ ಎಂಟು ಮೈಲಿ ದೂರದಲ್ಲಿರುವ ಜಯಪುರಕ್ಕೆ ಬಂದು ರಸ್ತೆಯ ಬಳಿಯೇ ಇದ್ದ ಒಂದು ಪ್ರವಾಸಿಗರ ತಾಣದಲ್ಲಿ ಅಡಿಗೆಯ ವ್ಯವಸ್ಥೆಯನ್ನು ಮಾಡಿಕೊಂಡರು. ಇನ್ನೇನು ಅಡಿಗೆ ಆಯಿತು ಎನ್ನುವಾಗ, ಐದು ಸೇರು ಅಕ್ಕಿ ಬೇಯುತ್ತಿದ್ದ ಮಣ್ಣಿನ ಗಡಿಗೆಯನ್ನು ಎತ್ತಿ ಗಂಜಿ ಬಸಿಯಬೇಕೆಂದು ಇಳಿಸಿದಾಗ ಇದ್ದಕ್ಕಿದ್ದಂತೆ ಅದು ಒಡೆದು ಹೋಯಿತು. ಅನ್ನ ಮತ್ತು ಗಂಜಿ ನೆಲದ ಮೇಲೆ ಕದಡಿಹೋಯಿತು. ಮತ್ತೆ ಅಡಿಗೆ ಮಾಡಬೇಕೆಂದು ಹೊರಟರೆ ಬಹಳ ತಡವಾಗುವುದಲ್ಲ ಎಂದು ಎಲ್ಲರೂ ಮುಂದೇನು ಮಾಡುವುದೆಂದು ತೋಚದೆ ಚಿಂತಾಕ್ರಾಂತರಾದರು. ಶ್ರೀಮಾತೆ ಒಂದು ಸ್ವಲ್ಪವೂ ವಿಚಲಿತರಾಗಲಿಲ್ಲ. ಭತ್ತದ ಒಣಹುಲ್ಲಿನ ಒಂದು ಗಂಟಿನಿಂದ ನಿಧಾನವಾಗಿ ಕೆಳಗೆ ಬಿದ್ದಿದ್ದ ಗಂಜಿಯಿಂದ ಅನ್ನವನ್ನು ಬೇರೆ ಮಾಡುತ್ತ ಮೇಲೆ ಮೇಲೆ ಇದ್ದ ಅನ್ನವನ್ನೆಲ್ಲ ಒಂದುಗೂಡಿಸಿದರು. ತದನಂತರ ಕೈತೊಳೆದುಕೊಂಡು ತಮ್ಮ

ಪೆಟ್ಟಿಗೆಯಿಂದ ಶ್ರೀರಾಮಕೃಷ್ಣರ ಭಾವಚಿತ್ರವನ್ನು ಹೊರತೆಗೆದು ಒಂದು ಕಡೆ ಕೂಡಿಸಿದರು. ಸಾಲ ಮರದ ಎಲೆಗಳಿಂದ ಮಾಡಿದ ಊಟದೆಲೆಯ ಮೇಲೆ, ಅದೇ ಮರದ ಕಡ್ಡಿಯಿಂದ ಒಂದಿಷ್ಟು ಅನ್ನವನ್ನು ಬಡಿಸಿ, ಅದರ ಬದಿಗೆ ಸ್ವಲ್ಪ ಬೇಳೆಯ ಸಾರು ಹಾಗೂ ಪಲ್ಯವನ್ನು ಬಡಿಸಿದರು. ಕೈಜೋಡಿಸಿ ಶ್ರೀರಾಮಕೃಷ್ಣರಿಗೆ ಪ್ರಾರ್ಥನೆ ಮಾಡುತ್ತ, ''ಇವತ್ತು ಹೀಗೆಯೇ ವ್ಯವಸ್ಥೆ ಆಗಿದೆ. ಬೇಗ ಬೇಗ ಒಂದೆರಡು ಅಗಳು ಬಿಸಿ ಅನ್ನ ತಿಂದುಬಿಡಿ'' ಎಂದು ಹೇಳಿದರು. ಶ್ರೀಮಾತೆ ನಡೆದುಕೊಂಡ ರೀತಿಯನ್ನು ನೋಡಿ ಎಲ್ಲರೂ ನಗಲು ಪ್ರಾರಂಭಿಸಿದಾಗ, ಅವರು ಹೇಳಿದರು, ''ಯಾವಾಗ ಹೇಗಿರಬೇಕೋ ಆವಾಗ ಹಾಗೇ ಇರಬೇಕು, ಸರಿಯಾದ ರೀತಿ ಮಾಡಬೇಕು. ಎಲ್ಲಿ! ಎಲ್ಲರೂ ಕುಳಿತು ನಿಮ್ಮ ಊಟವನ್ನು ಮುಗಿಸಿ ಬೇಗ!''

ಶ್ರೀಮಾತೆ ಕೊನೆಯ ಬಾರಿ ಕೋಯಲ್‌ಪಾರದಿಂದ ಕಲ್ಕತ್ತೆಗೆ ಹೋಗುವ ಮುಂಜಾನೆ, ಪ್ರಯಾಣ ಮಾಡುವ ಮೊದಲೇ ಬೆಳಿಗ್ಗೆ ಐದು ಗಂಟೆಗೇ ಠಾಕೂರರ ಪೂಜೆ ಮಾಡಿ ಮುಗಿಸಿದರು. ಸಾಮಾನ್ಯವಾಗಿ ಅಷ್ಟು ಬೇಗ ಪೂಜೆಯನ್ನು ಅವರು ಮಾಡುತ್ತಿರಲಿಲ್ಲ. ಆದರೆ ಬೇರೆ ವಿಧಿಯಿಲ್ಲದೆ ಯಾರಿಗೂ ತೊಂದರೆಯಾಗದಿರಲಿ ಎಂಬ ಕಾಳಜಿಯಿಂದ ಬೇಗ ಪೂಜೆ ಮುಗಿಸಿದ್ದರು. ಇತರ ದಿನಗಳಂತೆ ವಿಳಂಬವಾಗಿ ಪೂಜೆ ಪ್ರಾರಂಭಿಸಿದ್ದರೆ ಯಾತ್ರೆಗೆ ತೊಂದರೆಯಾಗುತ್ತಿತ್ತು.

ವಾಸ್ತವ ಪರಿಸ್ಥಿತಿಯೊಂದಿಗೆ ಹೊಂದಿಕೊಂಡು ತಮ್ಮ ಜೀವನವನ್ನು ಅಳವಡಿಸಿಕೊಳ್ಳವುದು ಶ್ರೀಮಾತೆಯವರ ವಿಶೇಷ ಗುಣವೆಂದೇ ಹೇಳಬೇಕು. ಯಾವುದು ಸಮಂಜಸ ಎಂಬ ಪ್ರಜ್ಞೆ ಸದಾ ಅವರಲ್ಲಿ ಇರುತ್ತಿತ್ತು. ಕೇವಲ ಶ್ರೀರಾಮಕೃಷ್ಣರನ್ನು ಕುರಿತು ಅವರು ಹಾಗಿದ್ದರು ಎಂದರೆ ತಪ್ಪಾಗುವುದು. ತಮ್ಮ ಸ್ವಂತ ವಿಚಾರದಲ್ಲೂ ಪ್ರಾಸಂಗಿಕ ಬುದ್ಧಿ ಕೈ ಬಿಡುತ್ತಿರಲಿಲ್ಲ. ಒಮ್ಮೆ ಪೋಲೀಸರ ಬಂಧನದಿಂದ ಬಿಡುಗಡೆ ಹೊಂದಿದ್ದ ಒಬ್ಬ ಯುವಕ ಕೋಯಲ್‌ಪಾರಾ ಆಶ್ರಮಕ್ಕೆ ಬಂದು ಶ್ರೀಮಾತೆಯ ಬಳಿ ದೀಕ್ಷೆ ನೀಡಿರೆಂದು ಕೇಳಿಕೊಂಡ. ಆಗಲೇ ಸಂಜೆಯಾಗಿತ್ತು. ತಮ್ಮ ಸ್ವಭಾವದಂತೆ ಪ್ರೀತಿಯಿಂದ ಅವನನ್ನು ಮಾತನಾಡಿಸುತ್ತ ಮರುದಿನ ಬೆಳಿಗ್ಗೆ ದೀಕ್ಷೆ ನೀಡುವುದಾಗಿ ಸಮ್ಮತಿಸಿದರು. ಆದರೆ ಕೋಯಲ್‌ಪಾರಾ ಆಶ್ರಮವನ್ನು ಪೋಲೀಸರು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಆ ಯುವಕನಿಗೆ ಆಶ್ರಮದಲ್ಲಿ ಉಳಿಯಲು ಸ್ಥಾನ ನೀಡಿದರೆ ವಿಪತ್ತು ಸಂಭವಿಸುವ ಸಾಧ್ಯತೆಯಿತ್ತು. ಪೋಲೀಸರ ಕಾವಲು ಅತಿ ಕಟ್ಟುನಿಟ್ಟಾಗಿತ್ತು. ಹೊರಗಡೆಯಿದ್ದ ಒಂದು ಮನೆಯಲ್ಲಿ ಅವನಿಗೆ ವ್ಯವಸ್ಥೆ ಮಾಡಲಾಯಿತು. ಮರುದಿನ ಮುಂಜಾನೆಯ ಹೊತ್ತಿನಲ್ಲಿ ಬ್ರಹ್ಮಚಾರಿ ವರದನ ಜೊತೆಯಲ್ಲಿ ಶ್ರೀಮಾತೆ ಜಗದಂಬಾ ಆಶ್ರಮದಿಂದ ರಾಧುವಿನ ಮನೆಗೆ ಹೋಗುತ್ತಿದ್ದಾಗ, ಆ ಯುವಕ ಸ್ನಾನ ಮುಗಿಸಿ ಇದ್ದಕ್ಕಿದ್ದಂತೆ ಹೊಲಗಳ ಮಧ್ಯೆ ಶ್ರೀಮಾತೆಯವರ ಮುಂದೆ ಪ್ರತ್ಯಕ್ಷನಾದ. ಶ್ರೀಮಾತೆ ಸ್ವಲ್ಪ ನೀರು ಕೊಡಲು ಹೇಳಿದಾಗ ಅವನು ಒಂದು ಸ್ಥಾನದಲ್ಲಿ ನೀರು ತಂದು ನೀಡಿದ. ಅವರು ಆಸನಕ್ಕಾಗಿ ತಡಕಾಡುತ್ತಿರುವುದನ್ನು ನೋಡಿ ಬ್ರಹ್ಮಚಾರಿ ಆಸನವನ್ನು ತಂದುಕೊಡಲೇ ಎಂದು ಕೇಳಿದ. ''ಪರವಾಗಿಲ್ಲ, ಅದಕ್ಕಾಗಿ ನೀನು ಮತ್ತೆ ಹಿಂದಿರುಗಿ ಹೋಗಬೇಕಿಲ್ಲ. ನಾವಿಬ್ಬರೂ ಕುಳಿತುಕೊಳ್ಳಲು ಒಂದೆರಡು ಒಣಹುಲ್ಲು ಕೊಡು,'' ಎಂದು ಹೇಳುತ್ತ ಶ್ರೀಮಾತೆ ಅದರ ಮೇಲೆ ಕುಳಿತುಕೊಂಡು, ಆಚಮನವನ್ನು ಮುಗಿಸಿ ದೀಕ್ಷೆ ಕರುಣಿಸಿದರು.

ಸಮಯಪ್ರಜ್ಞೆಯನ್ನು ಹೊಂದಿರುವುದು ಪೂಜೆಯಲ್ಲಿ ಬಹಳ ಮುಖ್ಯ. ಪ್ರಾತಃಕಾಲ, ಮಧ್ಯಾಹ್ನ, ಸಂಧ್ಯೆ ಇತ್ಯಾದಿಗಳಿಗೆ ಅನುಗುಣವಾಗಿ ಠಾಕೂರರ ಸೇವೆಯನ್ನು ಮಾಡಬೇಕಾಗುತ್ತದೆ. ಸಾಯಂಕಾಲ ಅಥವಾ ಸಂಧ್ಯಾಕಾಲದಲ್ಲಿ ಪ್ರಕೃತಿ ಶಾಂತವಾಗಿರುತ್ತದೆ. ಆದ್ದರಿಂದ ಆ ಸಮಯದಲ್ಲಿ ಭಗವಚ್ಚಿಂತನೆಯನ್ನು ಮಾಡಬೇಕು ಹಾಗೂ ದೇವತೆಯ ಆರತಿ, ಸಂಧ್ಯಾವಂದನೆಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಶಾಸ್ತ್ರಕಾರರು ಉಪದೇಶಿಸಿದ್ದಾರೆ. ದೇವಪೂಜೆಯನ್ನು ಪೂರ್ವಾಹ್ನದಲ್ಲೇ ಮಾಡಬೇಕು ಹಾಗೂ ಮಧ್ಯಾಹ್ನದೊಳಗೆ ದೇವತೆಯ ಸಲುವಾಗಿ ಅನ್ನಾದಿಗಳನ್ನು ನಿವೇದಿಸಬೇಕಾದ ಕಾಲ. ಮಧ್ಯಾಹ್ನದ ನಂತರ ಅಂದರೆ ಅಪರಾಹ್ನವನ್ನು ರಾಕ್ಷಸೀಕಾಲವೆಂದು ಪರಿಗಣಿಸಲಾಗಿದ್ದು, ಅಂತಹ ಸಮಯದಲ್ಲಿ ಅನ್ನಾದಿಗಳನ್ನು ನಿವೇದಿಸಬಾರದು. ಹಾಗೆ ಮಾಡಿದರೆ ಆಯಾ ದೇವತೆಯ ಪ್ರೀತಿಯಿಂದ ವಂಚಿತರಾಗುವುದದಲ್ಲದೆ ವಿಪರೀತ ಫಲಗಳನ್ನೂ ಎದುರಿಸಬೇಕಾದೀತು. ಆದ್ದರಿಂದ ಶ್ರೀಮಾತೆ ಹೇಳಿರುವ ಉಪದೇಶ ಅತ್ಯಮೂಲ್ಯ: ''ಭೋಗಸೇವೆಗಳನ್ನು ಸರಿಯಾದ ಸಮಯಕ್ಕೆ ನೀಡಬೇಕು.''

ಪೂಜೆಯ ವಿಚಾರ ಶುಚಿತ್ವಕ್ಕೆ ಶ್ರೀಮಾತೆ ಬಹಳ ಒತ್ತು ನೀಡುತ್ತಿದ್ದರು. ಶುಭ್ರವಾಗಿ ಸ್ನಾನ ಮಾಡುವುದು, ಸ್ವಚ್ಛವಾಗಿರುವ ವಸ್ತ್ರಗಳನ್ನು ಧರಿಸುವುದು ಹಾಗೂ ಪೂಜೆಯ ಆಸನದಲ್ಲಿ ಕುಳಿತುಕೊಳ್ಳುವುದು — ಕೇವಲ ಇವುಗಳನ್ನು ಶುಚಿತ್ವವೆಂದು ಶ್ರೀಮಾತೆ ಪರಿಗಣಿಸುತ್ತಿರಲಿಲ್ಲ. ಪುಷ್ಪಚಂದನಾದಿಗಳ ನಿವೇದನೆಯಿಂದ ಹಿಡಿದು ಕಡೆಯಲ್ಲಿ ಆತ್ಮನಿವೇದನೆಯ ತನಕ ಸರಿಯಾಗಿದ್ದರೆ ಪೂಜೆ ಸಾರ್ಥಕ ಹಾಗೂ ಸಫಲ. ಹೊರಗಿರುವ ವಸ್ತುಗಳನ್ನು ನಿವೇದಿಸುವಾಗ ಎರಡೂ ಕೈಗಳು ಅಪರಿಹಾರ್ಯ (ಬೇಕೇ ಬೇಕು). ಆದ್ದರಿಂದ ಹಸ್ತವು ಅಶುಚಿಯಾಗದಂತೆ ಶ್ರೀಮಾತೆ ಬಹಳ ಗಮನ ಹರಿಸುತ್ತಿದ್ದರು. ಅವರು ಹೇಳಿದಂತೆ, ''ಸೇವೆ ಸುಮ್ಮನೆ ಆದೀತೆ! ಸೇವಾಪರಾಧವಾಗದಂತೆ ಎಚ್ಚರವಾಗಿರಬೇಕು... ಪೂಜೆಯ ವೇಳೆಯಲ್ಲಿ ನಮ್ಮ ಶರೀರದ ಯಾವುದೇ ಅಂಗವನ್ನಾಗಲಿ ಅಥವಾ ಕೇಶವನ್ನು ಹಾಗೂ ಬಟ್ಟೆಯನ್ನು ಮುಟ್ಟಬಾರದು. ಒಂದೇ ಮನಸ್ಸಿನಿಂದ ಇದೆಲ್ಲವನ್ನೂ ನಿಭಾಯಿಸಬೇಕು.''

*(ಮುಂದಿನ ಸಂಚಿಕೆಗೆ)*